# ಪತಿತರಿಗೆ ಆಧ್ಯಾತ್ಮಿಕ ಜೀವನದಲ್ಲಿ ಭರವಸೆ

**ಸ್ವಾಮಿ ಶಾಂತಿವ್ರತಾನಂದ**

ನಾನಾ ಕಾರಣಗಳಿಂದ ಜೀವನದ ಬವಣೆಗಳಲ್ಲಿ ಬೆಂದವರು ಎಲ್ಲ ಬಗೆಯ ಕಷ್ಟಕಾರ್ಪಣ್ಯಗಳಿಗೆ ಒಳಗಾಗುತ್ತಾರೆ; ಜೀವನದಲ್ಲಿ ನಂಬಿಕೆಯನ್ನೇ ಕಳೆದುಕೊಳ್ಳುತ್ತಾರೆ. ಪತಿತರಿಗೆ, ಆರ್ತರಿಗೆ, ದುಃಖಿತರಿಗೆ ಆಶ್ರಯ ನೀಡುವವನಾದ ಭಗವಂತನು ಅವರಿಗೆ ಯಾವರೀತಿ ದಾರಿ ತೋರುವನು? ಈ ವಿಚಾರಗಳ ಬಗ್ಗೆ ಇಲ್ಲಿ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಐರ್ಲೆಂಡಿನ ಡಬ್ಲಿನ್ ಕೇಂದ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಗ್ರಂಥಗಳನ್ನೂ ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಉತ್ತಮ ಲೇಖನಗಳನ್ನು ಬರೆದಿದ್ದಾರೆ.

ಅಧ್ಯಾತ್ಮವೊಂದೇ ಪ್ರತಿಯೊಬ್ಬ ಮಾನವನಿಗೆ ನಿಜವಾದ ಭರವಸೆಯನ್ನು ನೀಡಬಲ್ಲದು, ಆಧಾರವಾಗಬಲ್ಲದು ಎಂದರೆ ಅತಿಶಯೋಕ್ತಿ ಆಗಲಾರದು. ಏಕೆಂದರೆ ರೂಪ, ಸಂಪತ್ತು, ಅಧಿಕಾರ, ಹೆಸರು-ಕೀರ್ತಿ ಇವು ಸುಖವನ್ನು ನೀಡಬಲ್ಲವುಗಳಾದರೂ, ಅವು ತಾತ್ಕಾಲಿಕವೇ ಹೊರತು ಶಾಶ್ವತವಲ್ಲ. ಶಾಶ್ವತವಾದ ಆನಂದವನ್ನು ಅಧ್ಯಾತ್ಮ ಮಾತ್ರ ನೀಡಬಹುದು.

### ಅಧ್ಯಾತ್ಮ ಎಂದರೇನು?

ಭಗವಂತನನ್ನು ಅಥವಾ ಬ್ರಹ್ಮನನ್ನು ಅರಿಯುವುದೇ ಅಧ್ಯಾತ್ಮ. ಭಗವಂತನ ಸಾಕ್ಷಾತ್ಕಾರ, ಸತ್ಯದರ್ಶನವನ್ನು ಹೊಂದಲು ಬೇಕಾಗುವುದೇ ಆಧ್ಯಾತ್ಮಿಕತೆ. ಇದನ್ನು ಪಡೆಯಲು ಪವಿತ್ರತೆ, ಸತ್ಯನಿಷ್ಠೆ, ಮನೋನಿಗ್ರಹ, ಇಂದ್ರಿಯ ನಿಗ್ರಹ ಮುಂತಾದವು ಅತ್ಯಾವಶ್ಯಕ. ಇವುಗಳನ್ನು ಹೊಂದಿರುವವರೇ ಸಜ್ಜನರು.

ಅನೈತಿಕ ಜೀವನ, ವ್ಯಭಿಚಾರ, ವಿಷಯಲಂಪಟತನ ಇತ್ಯಾದಿ ಗುಣಗಳನ್ನು ಅಥವಾ ಅಭ್ಯಾಸಗಳನ್ನು ಹೊಂದಿರುವ ವ್ಯಕ್ತಿಯನ್ನು ಪಾಮರ ಎನ್ನಬಹುದು. ತಿಳಿದೋ, ತಿಳಿಯದೆಯೋ, ಸನ್ನಿವೇಶಗಳ ಒತ್ತಡದಿಂದ, ಆಕರ್ಷಣೆಗಳಿಂದ ಒಬ್ಬ ವ್ಯಕ್ತಿ ಹೀಗೆ ಮಾಡಿರಬಹುದು. ಆದರೆ ತನ್ನ ತಪ್ಪನ್ನು ತಿಳಿದು, ಅರಿತು ಆಧ್ಯಾತ್ಮಿಕ ಜೀವನ ನಡೆಸಲು ಸಾಧ್ಯವೇ ಎಂಬ ಪ್ರಶ್ನೆ, ಸಂಶಯ ಹಲವರಲ್ಲಿ ಮೂಡುವುದು ಸಹಜವೇ.

ಪಾಮರರಿಗೆ ಅಧ್ಯಾತ್ಮವೊಂದೇ ಪೂರ್ಣವಾದ ಆಸರೆಯನ್ನು ನೀಡಿ, ಅತ್ಯುತ್ತಮರಾಗಲು ಸದವಕಾಶ ನೀಡಬಲ್ಲದು. ಸಾಧು-ಸಂತರ, ಶಾಸ್ತ್ರಗಳ ಉಪದೇಶ, ಅನೇಕರ ಜ್ವಲಂತ ಉದಾಹರಣೆಗಳೇ ಇವಕ್ಕೆ ಸಾಕ್ಷಿ.

ಅಂಗುಲಿಮಾಲ, ಗಿರೀಶ್‌ಚಂದ್ರ ಘೋಷ್, ಅಜಾಮಿಳ, ಮುಂತಾದವರು ಇದಕ್ಕೆ ಸಾಕ್ಷಿ.

**ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥**

*(ಗೀತಾ ೯-೩೦)*

'ಅತ್ಯಂತ ಹೀನಕಾರ್ಯಗಳಲ್ಲಿ ತೊಡಗಿದ್ದರೂ, ವಿಚಲಿತನಾಗದೆ ನನ್ನನ್ನು ಅನನ್ಯ ಮನಸ್ಸಿನಿಂದ ಭಜಿಸಿದರೆ ಅವನನ್ನು ಸಾಧುವೆಂದೇ ತಿಳಿಯಬೇಕು. ಏಕೆಂದರೆ ಅವನು ಸರಿಯಾದ ನಿರ್ಧಾರದಲ್ಲಿ ನಡೆಯುತ್ತಿದ್ದಾನೆ.'

**ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ**
**ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥**

*(ಗೀತಾ. ೯-೩೧)*

'ಹೇ ಕೌಂತೇಯ! ಅವನು ಬೇಗನೆ ಧರ್ಮಾತ್ಮನಾಗುತ್ತಾನೆ ಮತ್ತು ಶಾಶ್ವತವಾದ ಶಾಂತಿಯನ್ನು ಹೊಂದುತ್ತಾನೆ. ನನ್ನ ನಿಜವಾದ ಭಕ್ತನು ಎಂದಿಗೂ ನಾಶವಾಗುವುದಿಲ್ಲ. ಈ ನಿಶ್ಚಿತ ಸತ್ಯವನ್ನು ತಿಳಿ.'



ಈ ಮೇಲಿನ ಮಾತುಗಳನ್ನು ಸ್ವಯಂ ಭಗವಂತನಾದ ಶ್ರೀಕೃಷ್ಣನು ಅರ್ಜುನನನ್ನು ನಿಮಿತ್ತವಾಗಿರಿಸಿಕೊಂಡು ನಮಗೆಲ್ಲಾ ತಿಳಿಸಿದ್ದಾನೆ. ಮನುಕುಲಕ್ಕೆ ಎಂತಹ ಭರವಸೆಯ ಮಾತು!

ಆದ್ದರಿಂದ ಪತಿತರು, ಪಾಮರರು, ಪಾಪಗಳನ್ನು ಮಾಡಿದವರು ಎಂದಿಗೂ ಹತಾಶರಾಗದೆ ಭಗವದಭಿಮುಖವಾದ ಜೀವನವನ್ನು ನಡೆಸಬಹುದು, ಆದರಿಂದ ಕೃತಕೃತ್ಯರಾಗಬಹುದು.

**ಕೋಟಿಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ।**

'ಭಗವಂತನ ನಾಮಸ್ಮರಣೆ ಮಾತ್ರದಿಂದ ಕೋಟಿ ಜನ್ಮಗಳ ಪಾಪವು ನಾಶವಾಗುತ್ತದೆ.'

ಹಾಗಾದರೆ ನಮ್ಮಲ್ಲಿ ಅನೇಕರು ಭಗವನ್ನಾಮ ಜಪ ಮಾಡುತ್ತಿದ್ದರೂ, ಪಾಪಗಳು ಸಂಪೂರ್ಣವಾಗಿ ನಾಶವಾಗಿಲ್ಲ ಏಕೆ? ಎಂಬ ಪ್ರಶ್ನೆ ಬರುವುದು ಸ್ವಾಭಾವಿಕ ಮತ್ತು ಸರಿಯೂ ಕೂಡ. ನಾವು ತದೇಕಚಿತ್ತದಿಂದ, ಸಂಪೂರ್ಣ ಮನಸ್ಸಿನಿಂದ, ಪ್ರಾಮಾಣಿಕವಾಗಿ ಭಗವಂತನ ಹೆಸರನ್ನು ಜಪಿಸಿದರೆ, ಅದು ಸಾಧ್ಯ.

ದರೋಡೆಕೋರ ರತ್ನಾಕರ ಬ್ರಹ್ಮರ್ಷಿ ವಾಲ್ಮೀಕಿ ಆದದ್ದೇ ಭಗವನ್ನಾಮ ಮಾಹಾತ್ಮ್ಯೆಯನ್ನು ಸಾರುತ್ತದೆ.

ಋಷಿ ಪ್ರಚೇತಸನ ಮಗ ರತ್ನಾಕರ. ಬಾಲ್ಯದಲ್ಲಿ ಕಾರಣಾಂತರಗಳಿಂದ ರತ್ನಾಕರನು ಕಾಡಿನಲ್ಲಿ ತಮ್ಮ ಮಾತಾ-ಪಿತೃಗಳಿಂದ ಬೇರೆಯಾಗುತ್ತಾನೆ. ದಾರಿಕಾಣದೆ ಅಲೆಯುತ್ತಿದ್ದಾಗ, ಬೇಡನೊಬ್ಬ ರತ್ನಾಕರನನ್ನು ರಕ್ಷಿಸಿ, ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಸಮಯ ಕಳೆದಂತೆ, ರತ್ನಾಕರನು ಉತ್ತಮ ಬೇಟೆಗಾರನಾಗುತ್ತಾನೆ. ಸೂಕ್ತ ವಯಸ್ಸಿನಲ್ಲಿ ಬೇಡರ ಮನೆಯ ಸುಂದರ ಹೆಣ್ಣು ಮಗಳೊಂದಿಗೆ ರತ್ನಾಕರನ ವಿವಾಹವಾಗುತ್ತದೆ. ಹಲವು ಮಕ್ಕಳಿಗೆ ತಂದೆ ಆಗುತ್ತಾನೆ. ಸಂಸಾರ ಬೆಳೆದಂತೆ, ಬೇಟೆಯಿಂದ ಮನೆಯ ಖರ್ಚು-ವೆಚ್ಚಗಳನ್ನು ಸರಿದೂಗಿಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ರತ್ನಾಕರನು ಕಾಡಿನಲ್ಲಿ ಬರುವ ಜನರನ್ನು ಹೆದರಿಸಿ, ಅವರ ಬಳಿಯಿದ್ದ ಸಂಪತ್ತನ್ನು ದೋಚಲು ಪ್ರಾರಂಭಿಸುತ್ತಾನೆ. ಹೀಗೆ ರತ್ನಾಕರನು ಒಬ್ಬ ದರೋಡೆಕೋರನಾಗುತ್ತಾನೆ.

ಒಮ್ಮೆ ರತ್ನಾಕರನು ನಾರದನನ್ನು ಹಿಡಿದು ದೋಚಲು ಪ್ರಯತ್ನಿಸಿದಾಗ, ನಾರದರ ಉಪದೇಶ ರತ್ನಾಕರನಿಗೆ ಕಣ್ತೆರೆಸು



ತ್ತದೆ. ನಾರದನು ರತ್ನಾಕರನಿಗೆ 'ಮರ' ಎಂಬ ಮಂತ್ರವನ್ನು ನೀಡಿ, ತಾನು ಪುನಃ ಬರುವವರೆಗೆ, ಜಪ ಮಾಡುತ್ತಿರಲು ತಿಳಿಸಿ ಹೋಗುತ್ತಾನೆ. ರತ್ನಾಕರನು, 'ಮರ, ಮರ, ಮರ....' ಎಂದು ಉಚ್ಚರಿಸುತ್ತಾ ಅದು 'ರಾಮ' ಎಂದಾಗುತ್ತದೆ. ಹಲವು ವರ್ಷಗಳು ಕಳೆದ ಮೇಲೆ ಭಗವನ್ನಾಮ ಜಪದಿಂದ ಅವನು ತನ್ನ ಪಾಪಗಳನ್ನು ಕಳೆದುಕೊಂಡು ಬ್ರಹ್ಮರ್ಷಿಯಾಗುತ್ತಾನೆ. ರಾಮಾಯಣ ಮಹಾ ಕಾವ್ಯವನ್ನು ರಚಿಸುತ್ತಾನೆ.

ಹೀಗೆ ದರೋಡೆಕೋರನಾಗಿದ್ದ ರತ್ನಾರಕನು ಭಗವನ್ನಾಮ ಜಪದಿಂದ ಬ್ರಹ್ಮರ್ಷಿ ವಾಲ್ಮೀಕಿಯಾಗುತ್ತಾನೆ.

**'ನಾಮಸ್ಮರಣಾದನ್ಯೋಪಾಯಂ ನ ಹಿ ಪಶ್ಯಾಮೋ ಭವ ತರಣೇ'।**

'ಭವಸಾಗರವನ್ನು ದಾಟಲು ನಾಮಸ್ಮರಣೆಗಿಂತ ಉತ್ತಮವಾದ ಉಪಾಯ ಇನ್ನೊಂದು ಕಾಣುವುದಿಲ್ಲ' ಎಂಬ ಮಾತನ್ನು ಇಲ್ಲಿ ನಾವು ಸ್ಮರಿಸಿಕೊಳ್ಳಬಹುದು.

೧೭ನೇ ಶತಮಾನದಲ್ಲಿ ಲಕ್ಷ್ಮೀಧರ ಎಂಬ ಕವಿಗಳು ಪುರೀ ಜಗನ್ನಾಥದಲ್ಲಿ ನೆಲೆಯೂರಿದ್ದರು. ಅವರು 'ನಾಮಕೌಮುದಿ' ಮುಂತಾದ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಲಕ್ಷ್ಮೀಧರರನ್ನು ಕಾಣಲು, ಅವರ ಬಳಿ ನಾಮ ಮಾಹಾತ್ಮ್ಯೆಯ ಕುರಿತು ಕೆಲವು ತಾತ್ತ್ವಿಕ ವಿಚಾರಗಳನ್ನು ವಿಮರ್ಶಿಸಲು ಸ್ವಾಮಿ ಬೋಧೇಂದ್ರ ಸರಸ್ವತಿಗಳೂ ಅಲ್ಲಿಗೆ ಬರುತ್ತಾರೆ. ಆದರೆ ಅವರಿಗೆ ಲಕ್ಷ್ಮೀಧರರ ಮನೆ ತಿಳಿಯದೆ ಅವರ ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತಿರುತ್ತಾರೆ. ಈಗಾಗಲೇ ಕೆಲವು ದಿವಸಗಳ ಹಿಂದೆ ಲಕ್ಷ್ಮೀಧರನು ಸ್ವರ್ಗಸ್ಥರಾಗಿರುವುದೂ ಅವರಿಗೆ ತಿಳಿದಿರುವುದಿಲ್ಲ.

ಒಬ್ಬ ಹೆಂಗಸು ಬುರುಖಾ ಧರಿಸಿ ಲಕ್ಷ್ಮೀಧರನ ಮನೆಯನ್ನು ಪ್ರವೇಶಿಸುತ್ತಾಳೆ. ಅವಳನ್ನು ಕೆಲವು ಮುಸ್ಲಿಮರು ಬಲವಂತವಾಗಿ ಅಪಹರಿಸಿ ತಪ್ಪು ಕೆಲಸಕ್ಕಾಗಿ ಉಪಯೋಗಿಸಿರುತ್ತಾರೆ. ಅವಳು ಪತಿತಳಾಗಿ, ಮನನೊಂದು ಪ್ರಾಯಶ್ಚಿತ್ತಕ್ಕಾಗಿ ಲಕ್ಷ್ಮೀಧರನ ಮನೆಗೆ ಮಾರ್ಗದರ್ಶನಕ್ಕಾಗಿ ಬರುತ್ತಾಳೆ.

ಲಕ್ಷ್ಮೀಧರನ ಮಗನು ಪುರಿಯಲ್ಲಿರುವ ಕಲ್ಯಾಣಿಯಲ್ಲಿ ಭಗವಂತನ ನಾಮಜಪ ಮಾಡುತ್ತಾ , ಮೂರು ಬಾರಿ ಮುಳುಗುವಂತೆ ತಿಳಿಸುತ್ತಾನೆ. ಆಶ್ಚರ್ಯವೆಂದರೆ ಆ ಹೆಂಗಸು ಅದೇ ರೀತಿ ಮಾಡಿದಾಗ, ಅಪಹರಣದ ಸಮಯದಲ್ಲಿ ಹೇಗೆ ಸೀರೆಯನ್ನು ಉಟ್ಟಿದ್ದಳೋ, ಹಣೆಗೆ ಸಿಂಧೂರವನ್ನು ಧರಿಸಿದ್ದಳೋ, ಪವಿತ್ರ ಮನಸ್ಸು ಉಳ್ಳವಳಾಗಿದ್ದಳೋ ಅದೇ ಸ್ಥಿತಿಯನ್ನು ಆ ಹೆಂಗಸು ಪಡೆದಳು ಎಂದು ಕಥೆಯಿದೆ. ಹೀಗೆ ಭಗವಂತನ ಜಪ, ಧ್ಯಾನ, ಪ್ರಾರ್ಥನೆಗಳಿಂದ ಪತಿತನು, ಪಾಮರನು ಉತ್ತಮನಾಗಬಹುದು. ಆದರೆ ಒಂದು ಕಡೆ ಭಗವನ್ನಾಮ ಜಪ ಮಾಡುತ್ತಾ , ಇನ್ನೊಂದೆಡೆ ಪಾಪ ಕಾರ್ಯಗಳನ್ನು ಎಸಗಬಾರದು. ಎಚ್ಚರದಿಂದಿರಬೇಕು.

**ಶ್ರೀ ರಾಮ ಚರಮ ಶ್ಲೋಕ**

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।**
**ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ ॥**

'ಯಾವುದೇ ಒಬ್ಬ ವ್ಯಕ್ತಿ ನನ್ನಲ್ಲಿ ಶರಣಾಗತನಾಗಿ 'ನಾನು ನಿನ್ನವನು' ಎನ್ನುವನೋ, ಅಂತಹ ಎಲ್ಲ ಜೀವಿಗಳನ್ನೂ ನಾನು ಪರಿಪೂರ್ಣವಾಗಿ ರಕ್ಷಿಸುತ್ತೇನೆ. ಇದು ನನ್ನ ಪ್ರತಿಜ್ಞೆ.'

ಸಾಮಾನ್ಯವಾಗಿ ನಾವು ಅಧರ್ಮ, ಅನೈತಿಕ ಮಾರ್ಗದಲ್ಲಿ ನಡೆಯುವುದಾದರೂ ಏಕೆ? ನಮ್ಮ ದೌರ್ಬಲ್ಯಗಳಿಂದಾಗಿ, ಕೆಟ್ಟ ಚಟಗಳಿಂದಾಗಿ, ಗೀಳುಗಳಿಂದಾಗಿ.

ಅನೇಕ ಬಾರಿ ಇದಕ್ಕೆ ಮೂಲ ಕಾರಣ ನಾವು ನಮ್ಮ ದೇಹ-ಮನಸ್ಸು, ಹಾಗೂ ಈ ಸ್ಥೂಲ ಜಗತ್ತು ಇವು ವಾಸ್ತವ ಸತ್ಯ ಎಂಬ ತಪ್ಪು ಕಲ್ಪನೆಗಳು. ಈ ಜಗತ್ತು, ಇದರ ಆಗು-ಹೋಗುಗಳು, ವಹಿವಾಟುಗಳು ನಮಗೆ ಸತ್ಯವಾಗಿರುತ್ತವೆ. ಆದ್ದರಿಂದ ಜಗತ್ತಿನ ಭೋಗೈಶ್ವರ್ಯಗಳನ್ನು ಪಡೆಯಲು, ಅನುಭೋಗಿಸಲು ಅನೇಕ ರೀತಿಯ ತಪ್ಪು ಮಾರ್ಗಗಳನ್ನು ಬಲಹೀನತೆಯಿಂದ ಹಿಡಿಯುತ್ತೇವೆ; ಪತಿತರಾಗುತ್ತೇವೆ.

ಈ ನಾಮ-ರೂಪ ಜಗತ್ತು ಕೇವಲ ತೋರಿಕೆ. ಇದು ಕೆಲವು ದಿವಸಗಳದ್ದು ಮಾತ್ರ. ಆತ್ಮವೊಂದೇ ಸತ್ಯ, ಉಳಿದು ವೆಲ್ಲವೂ ಮಿಥ್ಯೆ ಎಂದು ಅರಿತರೆ, ಜಗತ್ತು ಸತ್ಯ ಎಂಬ ಬುದ್ಧಿಯು ಹೊರಟುಹೋಗುತ್ತದೆ. ಆಗ ನಾವು ಯಾವುದೇ ಪಾಪ ಕಾರ್ಯಗಳನ್ನು ಎಸಗುವುದಿಲ್ಲ. ಉದಾಹರಣೆಗೆ ಇಂದ್ರ ಮತ್ತು ವಿರೋಚನನ ಕಥೆಯನ್ನು ನಾವು ನೋಡಬಹುದು.

ವಿರೋಚನನು ಆತ್ಮ ಎಂದರೆ ದೇಹ ಎಂದು ತಪ್ಪು ತಿಳಿದು, ತನ್ನ ರಾಕ್ಷಸ ಕುಲಕ್ಕೂ ಅದನ್ನೇ ತಿಳಿಸುತ್ತಾನೆ. ಕಾರಣ ಅವರು ಶರೀರವನ್ನು ಚೆನ್ನಾಗಿ ಪೋಷಿಸಿದರು. ಅವರ ಆನಂದಕ್ಕಾಗಿ ಅನೇಕ ಪಾಪಕಾರ್ಯಗಳನ್ನು ಮಾಡಿ ಪತಿತರಾದರು. ಆದರೆ ಅದೇ ವ್ಯಕ್ತಿ ತಾನು ದೇಹದಲ್ಲಿ, ಮನಸ್ಸಿನಲ್ಲಿ ಬದಲಾಗಿ ಸತ್ಯ- ಶುದ್ಧ - ಬುದ್ಧ ಆತ್ಮವೇ ತಾನು ಎಂದು ಅರಿತಾಗ, ಯಾವುದೇ ತಪ್ಪು ಕೆಲಸಗಳನ್ನು ಅವನು ಮಾಡುವುದಿಲ್ಲ. ಅಜ್ಞಾನದಿಂದ ಅವನು ತಪ್ಪು ಮಾಡಿದ್ದರೂ, ಸತ್ಯವನ್ನು ತಿಳಿದು ಅದನ್ನು ತಾನು ಅಳವಡಿಸಿಕೊಂಡಾಗ, ಮಹಾತ್ಮನಾಗುತ್ತಾನೆ, ಸದಾಚಾರಿಯಾಗುತ್ತಾನೆ. ಪಾಮರನಿಗೆ ಭಕ್ತಿ ಅಥವಾ ಜ್ಞಾನಗಳು ಉತ್ತಮವಾದ ಆಸರೆಗಳು.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ||**
**ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ||**

*(ಗೀತಾ: ೧೮-೬೬)*

'ಎಲ್ಲಾ ಧರ್ಮಗಳನ್ನು ತ್ಯಜಿಸಿ ಕೇವಲ ನನ್ನಲ್ಲಿ ಶರಣಾಗು. ನಾನು ನಿನ್ನನ್ನು ಎಲ್ಲಾ ಪಾಪಗಳಿಂದ ಮುಕ್ತಗೊಳಿಸುತ್ತೇನೆ, ಶೋಕಿಸಬೇಡ.'

**ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ|**
**ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ||**

*(ಗೀತಾ. ೪-೩೬)*

'ನೀನು ಎಲ್ಲಾ ಪಾಪಿಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ, ಚಿಂತೆಯಿಲ್ಲ. ಆ ಪಾಪವೆಲ್ಲವನ್ನೂ ಜ್ಞಾನವೆಂಬ ತೆಪ್ಪದಿಂದಲೇ ದಾಟಿ ಬಿಡುವೆ.'

ಈ ಮೇಲಿನ ಮಾತುಗಳನ್ನು ಅಧ್ಯಾತ್ಮ ಜ್ಞಾನದ, ಬ್ರಹ್ಮ ಜ್ಞಾನದ ಮಹತ್ವವನ್ನು ತಿಳಿಸುವಾಗ ಭಗವಾನ್ ಶ್ರೀಕೃಷ್ಣನು ಹೇಳಿದ್ದಾನೆ.

ಕಸದ ಅಥವಾ ಹತ್ತಿಯ ಬಹು ದೊಡ್ಡ ರಾಶಿಯಿದ್ದರೂ, ಬೆಂಕಿಯ ಒಂದು ಕಿಡಿ ಅದನ್ನು ಸಂಪೂರ್ಣವಾಗಿ ಭಸ್ಮಮಾಡುತ್ತದೆ. ನೂರಾರು ವರ್ಷಗಳಿಂದ ಕೋಣೆಯೊಂದು ಕತ್ತಲಿನಿಂದ ತುಂಬಿದ್ದರೂ, ಬೆಳಕಿನಿಂದಾಗಿ ಕ್ಷಣಾರ್ಧದಲ್ಲಿ ಕತ್ತಲು ಮಾಯವಾಗುತ್ತದೆ. ಬೆಂಕಿಯ ಕಿಡಿಯೊಂದು ಮಹಾ ಅರಣ್ಯವನ್ನೇ ನಾಶ ಮಾಡುತ್ತದೆ. ಹೀಗೆ ಆತ್ಮಜ್ಞಾನವು ನಮ್ಮ ಅಸಂಖ್ಯ ಪಾಪಗಳನ್ನು, ಕಲ್ಮಶಗಳನ್ನು ನಾಶಮಾಡಿ ಜ್ಞಾನವನ್ನು ತರುವುದರಲ್ಲಿ ಯಾವುದೇ ಸಂದೇಹವಿಲ್ಲ. ✽

## ಅವನು ಕುರುಡನಲ್ಲ...!

ವೃಂದಾವನದಲ್ಲಿ ವಾಸವಾಗಿದ್ದ ಒಬ್ಬ ಸಾಧು ಸಂಪೂರ್ಣ ಕುರುಡನಾಗಿದ್ದ. ಆದರೆ ಶ್ರೀಕೃಷ್ಣನ ಪರಮಭಕ್ತ. ಒಂದು ಸಲ ಅವನಿಗೆ ಬಾಂಕೇ ಬಿಹಾರಿ ಮಂದಿರಕ್ಕೆ ಹೋಗುವ ಆಸೆಯಾಯಿತು. ಅವನು ತನ್ನ ಶಿಷ್ಯಂದಿರಿಗೆ ಅದನ್ನು ತಿಳಿಸಿದ. ಅವರೆಲ್ಲ ಅತ್ಯಂತ ಆನಂದದಿಂದ ತಮ್ಮ ಗುರುಗಳನ್ನು ಕರೆದುಕೊಂಡು ಮಂದಿರಕ್ಕೆ ಹೊರಟರು. ಅಲ್ಲಿ ತುಂಬಾ ಜನಸಂದಣಿ. ಎಲ್ಲೂ ಜಾಗವೇ ಇಲ್ಲ. ಅಷ್ಟರಲ್ಲಿ ಈ ಸಾಧುಗಳು ಬಂದುದನ್ನು ಕಂಡು ಒಬ್ಬ ಗೊಣಗಾಡಿದ: "ಇವರೇಕೆ ಇಲ್ಲಿಗೆ ಬಂದರು? ಅವರಿಗೋ, ಏನೂ ಕಾಣಿಸುವುದಿಲ್ಲ!" ಇನ್ನೊಬ್ಬ ಹೇಳಿದ: "ಅವರೊಂದಿಗೆ ಇನ್ನಷ್ಟು ಜನ ಬಂದು ಮತ್ತೆ ಗದ್ದಲ.." ಅವರೊಂದಿಗೆ ಮತ್ತೊಬ್ಬ ದನಿ ಸೇರಿಸಿದ: " ಹೌದು, ಅವರು ತಮ್ಮ ಆಶ್ರಮದಲ್ಲೇ ಇದ್ದರೆ ಚೆನ್ನಾಗಿತ್ತು.."

ಇದನ್ನೆಲ್ಲ ಕೇಳಿಸಿಕೊಂಡ ಆ ಸಾಧು ಕೊನೆಗೆ ಹೇಳಿದ: "ಹೌದಪ್ಪಾ, ನಾನು ಕುರುಡ - ನನಗೇನೂ ಕಾಣಿಸದು, ನಿಜ. ಆದರೆ ಭಗವಂತ ಕುರುಡನಲ್ಲವಲ್ಲ! ನಾನು ಇಲ್ಲಿಗೆ ಬಂದದ್ದು ಅವನಿಗೆ ಕಂಡೇ ಕಾಣಿಸುತ್ತದೆ. ನನಗೆ ಇನ್ನೇನು ತಾನೇ ಬೇಕು?... ಮಗೂ, ಮನುಷ್ಯನಿಗೆ ಮೊದಲು ಇರಬೇಕಾದದ್ದು ದೇವರ ಇರುವಿಕೆಯಲ್ಲಿ ಸಂಪೂರ್ಣ ಶ್ರದ್ಧೆ. ಅವನು ಎಲ್ಲೆಲ್ಲೂ ಇದ್ದಾನೆ. ನಿನ್ನ ಬಗ್ಗೆ ಅವನಿಗೆ ಚೆನ್ನಾಗಿ ಗೊತ್ತಿದೆ!"

*(ಸಂಗ್ರಹ)*